ಜ್ಞಾನ ಅತೀಂದ್ರಿಯ ಸುಖದ ಹಿಂದೆ - ಹಿಂದೆಯೇ ಧಾವಿಸುತ್ತಾರೆ. ಅಯ್ಯಾ ! ಸಮ್ಯಕ್‌ದೃಷ್ಟಿ ಜೀವವು ಕಪ್ಪೆಯಾಗಿರಲಿ ಅಥವಾ ಸಾವಿರ ಯೋಜನದ ಮಹಾಮತ್ಸ್ಯವಾಗಿರಲಿ ಅದು ಕೂಡ ನನ್ನ ಸಂಪತ್ತು ನನ್ನ ಹತ್ತಿರವೇ ಇದೆಯೆಂದು ಮನ್ನಿಸುತ್ತದೆ. ಪುಣ್ಯ - ಪಾಪದ ಭಾವ ಮತ್ತು ಅವುಗಳ ಫಲದಲ್ಲಿ ಪ್ರಾಪ್ತವಾದ ಸಂಯೋಗಗಳು ನನ್ನ ಸಂಪತ್ತು ಅಲ್ಲವೆಂಬ ದೃಢ ಶ್ರದ್ಧೆಯಿರುತ್ತದೆ.

ಈ ಪ್ರಕಾರ ಸಮ್ಯಕ್‌ದೃಷ್ಟಿಯು ಶ್ರದ್ಧೆ - ಜ್ಞಾನ ಪರಿಣತಿಯ ಅಪೇಕ್ಷೆಯಿಂದ ಪರಭಾವದ ಪರಮ ತ್ಯಾಗಿಯಿದ್ದಾನೆ-ಸನ್ಯಾಸಿಯಿದ್ದಾನೆ. ಮತ್ತು ಸಹಜಾತ್ಮ ಸ್ವಭಾವದ ಯಥಾರ್ಥ ಪ್ರತೀತಿಯಿಲ್ಲದೆ ವ್ಯವಹಾರದಿಂದ ಸಂಯೋಗಗಳ ತ್ಯಾಗ ಮಾಡಿದರೆ ಅದು ನಿಜವಾದ ತ್ಯಾಗವೇ ಎನಿಸುವುದಿಲ್ಲ.

ಮಿಥ್ಯಾದೃಷ್ಟಿಯು ಶುಭ ರಾಗದಲ್ಲಿ ಲಾಭವಿದೆಯೆಂದು ಮನ್ನಿಸುತ್ತಾನೆ ಮತ್ತು ಶರೀರದ ಕ್ರಿಯೆಯನ್ನು ಧರ್ಮದ ಸಾಧನವೆಂದು ಮನ್ನಿಸುತ್ತಾನೆ. ಆದರೆ ಸಮ್ಯಕ್‌ದೃಷ್ಟಿಯು ರಾಗವನ್ನು ರೋಗವೆಂದು ತಿಳಿಯುತ್ತಾನೆ. ಮತ್ತು ಆ ರೋಗವನ್ನು ದೂರ ಮಾಡುವ ಉಪಾಯ ಮಾಡುತ್ತಿರುತ್ತಾನೆ. ಅಜ್ಞಾನಿಯು ಶರೀರದ ರೋಗವನ್ನಂತೂ ರೋಗವೆಂದು ತಿಳಿಯುತ್ತಾನೆ, ಅದನ್ನು ದೂರ ಮಾಡುವ ಉಪಾಯವನ್ನೂ ಮಾಡುತ್ತಿರುತ್ತಾನೆ. ಅವನಿಗೆ ಶರೀರ ಮೊದಲಾದವುಗಳಲ್ಲಿ ತನ್ನತನದ ಬುದ್ಧಿರೂಪವಾದ ಸನ್ನಿಪಾತದ ರೋಗವು ಅಂಟಿಕೊಂಡಿದೆ ಆದರೆ ಅಜ್ಞಾನಿಗೆ ಅದರ ಪ್ರಜ್ಞೆಯಿಲ್ಲ. ಜ್ಞಾನಿಗಂತೂ ಈ ರೋಗವೇ ಇಲ್ಲ. ಆದರೆ ಪುಣ್ಯ - ಪಾಪಗಳ ಭಾವರೂಪದ ಬೊಕ್ಕೆಗಳು ಬರುತ್ತಿರುತ್ತವೆ, ಅವನ್ನು ದೂರ ಮಾಡುವ ಪ್ರಯತ್ನ ಮಾಡುತ್ತಿರುತ್ತಾನೆ.

ಆತ್ಮನು ಅತೀಂದ್ರಿಯ ಆನಂದದ ಮಹಾನ ಗಣಿಯಿದಾನೆ. ಅವನಲ್ಲಿ ದೃಷ್ಟಿ - ಜ್ಞಾನ ಮತ್ತು ಸ್ಥಿರತೆ ಮಾಡುತ್ತಿದ್ದಂತೆಯೇ ಅನಂತ ಅತೀಂದ್ರಿಯ ಆನಂದವು ಹೊರಗೆ ಬರುತ್ತದೆ, ಅನುಭವದಲ್ಲಿ ಬರುತ್ತದೆ. ಆತ್ಮನು ಜ್ಞಾನ ಮತ್ತು ಆನಂದಮಯನಿದ್ದಾನೆ. ಆತ್ಮನು ಮೂರು ಕಾಲದಲ್ಲಿಯೂ ಪುಣ್ಯ - ಪಾಪ ಹಾಗೂ ರಾಗಮಯನಿಲ್ಲ. ಅಯ್ಯಾ ಸೋದರನೇ ! ನೀನು ಶರೀರದ ಶೋಧನೆ ಮಾಡುತ್ತಿರುವೆ ಆದರೆ ಒಂದು ಸಲ ನಿನ್ನ ಆತ್ಮನ ಪರಿಶೋಧನೆ ಮಾಡಿ ಅವನಲ್ಲಿ ಏನು ತುಂಬಿದೆಯೆಂಬುದನ್ನು ನೋಡಿಕೊಳ್ಳು !

ಶ್ರೀಮದ್ ರಾಜಚಂದರವರು ಹೀಗೆ ಹೇಳುತ್ತಾರೆ -

**ಆತ್ಮ ಭ್ರಾಂತಿ ಸಮ ರೋಗ ನಹೀ ಸದ್ಗುರು ವೈದ್ಯ ಸುಜಾನ ।**
**ಗುರು ಆಜ್ಞಾ ಸಮ ಪಥ್ಯ ನಹೀ ಔಷಧ ವಿಚಾರ ಧ್ಯಾನ ॥**

ಭಗವಾನ ಆತ್ಮನು ಅತೀಂದ್ರಿಯ ಜ್ಞಾನ ಮತ್ತು ಆನಂದಮಯನಿದ್ದಾನೆಂಬುದನ್ನು ಮನ್ನಿಸದೆ, ಆತ್ಮನನ್ನು ರಾಗವುಳ್ಳವನು, ಶರೀರವುಳ್ಳವನು , ಪುಣ್ಯ - ಪಾಪವುಳ್ಳವನು, ಸಂಯೋಗವುಳ್ಳವನೆಂದು ಮನ್ನಿಸುವುದು ಅದು ಶುದ್ಧ ಭ್ರಾಂತಿಯಿದೆ. ಇದಕ್ಕೆ ಸಮಾನವಾದ ರೋಗವು ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ. ಆ ರೋಗ ದೂರ ಮಾಡುವ ಉಪಾಯವನ್ನು ಸದ್ಗುರುಗಳು ತಿಳಿಸಿಕೊಡುತ್ತಾರೆ. ಸದ್ಗುರುಗಳು ಎಲ್ಲಿಯವರೆಗೆ ತಿಳಿಸಿಕೊಡುತ್ತಾರೆಂದರೆ ನೀನು ನಮ್ಮ ಕುರಿತು ರಾಗ ಮಾಡಿದರೆ ಅದು ಕೂಡ ರೋಗವಿದೆಯೆಂದು ಹೇಳುತ್ತಾರೆ.

**ಪ್ರಶ್ನೆ :-** ಪ್ರಭು ! ಈ ರೋಗವನ್ನು ದೂರ ಮಾಡುವ ಉಪಾಯವೇನು ?

**ಉತ್ತರ :-** 'ಅನುಭವ ಚಿಂತಾಮಣಿ ರತನ ಅನುಭವ ಹೈ ರಸಕೂಪ ।
ಅನುಭವ ಮಾರಗ ಮೋಕ್ಷಕಾ ಅನುಭವ ಮೋಕ್ಷ ಸ್ವರೂಪ ॥

ನಿಜ ಶುದ್ಧಾತ್ಮನ ಅನುಭವ ಮಾಡುವುದೇ ರೋಗ ನಿವಾರಣೆ ಮಾಡುವ ಏಕಮಾತ್ರ ಉಪಾಯವಿದೆ. ಆದುದರಿಂದಲೇ ಜ್ಞಾನಿಗಳು ವ್ಯಾಪಾರ - ಉದ್ಯೋಗ ಮೊದಲಾದ ಕಾರ್ಯಗಳ ಮಧ್ಯದಲ್ಲಿ ಕೂಡ ಅನುಭವದ

ಸಮಯವನ್ನು ತೆಗೆದಿರಿಸುತ್ತಾರೆ. ಆತ್ಮನ ಸ್ಪರ್ಶ ಮಾಡಿ ಅನುಭವ ಮಾಡಿಕೊಳ್ಳುತ್ತಾರೆ. ಅನುಭವವು ಹೇಗೆ ಹೇಗೆ ವೃದ್ಧಿಸುತ್ತ ಹೋಗುತ್ತದೆ ಹಾಗೆ ಹಾಗೆ ಅವರಿಗೆ ಹೊರಗಿನ ಪ್ರವೃತ್ತಿನಲ್ಲಿ ಮತ್ತು ಸಂಯೋಗಗಳಿಂದ ವೈರಾಗ್ಯವು ವೃದ್ಧಿಸುತ್ತ ಹೋಗುತ್ತದೆ. ವ್ಯಾಪಾರ ಮೊದಲಾದ ಬಾಹ್ಯ ಪ್ರವೃತ್ತಿಯಲ್ಲಿ ಅವರ ಮನಸ್ಸು ತೊಡಗುವುದಿಲ್ಲ. ಅವು ಯಾವುದರಲ್ಲೂ ನೆಮ್ಮದಿಯೆನಿಸುವುದಿಲ್ಲ. ಇದೇ ಕಾರಣದಿಂದ ಆತ್ಮನಲ್ಲಿ ವಿಶೇಷ ಲೀನವಾಗುವ ಸಲುವಾಗಿ ಧರ್ಮಾತ್ಮರುಗಳು ಬಾಹ್ಯ ಸಂಯೋಗಗಳ ತ್ಯಾಗ ಮಾಡಿ ಮುನಿಯಾಗಿ ಅರಣ್ಯಕ್ಕೆ ಹೊರಟು ಹೋಗುತ್ತಾರೆ.

ತಮ್ಮ ಆತ್ಮನ ಸಾಧನೆಯ ಪುರುಷಾರ್ಥವು ಉಗ್ರರೂಪದಿಂದ ಆಗುತ್ತಿದ್ದಂತೆಯೇ ಬಾಹ್ಯದಲ್ಲಿನ ವಸ್ತುಗಳ ತ್ಯಾಗವು ಸ್ವಾಭಾವಿಕವಾಗಿಯೇ ಆಗಿ ಹೋಗುತ್ತದೆ. ಯಾವ ಪ್ರಕಾರ ಹುಚ್ಚು ಹಿಡಿದ ನಾಯಿಯು ಯಾವನಿಗೆ ಕಚ್ಚಿರುತ್ತದೆ ಅವನಿಗೆ ನೀರು, ಹವೆ, ಭೋಜನ ಮೊದಲಾದವುಗಳು ಸ್ವಲ್ಪ ಕೂಡ ರುಚಿಸುವುದಿಲ್ಲ. ಅವನಿಗೆ ಎಲ್ಲಿಯೂ ನೆಮ್ಮದಿಯೆನಿಸುವುದಿಲ್ಲ. ಅದೇ ಪ್ರಕಾರ ಯಾವನಿಗೆ ಅಂತರ್ಯದಲ್ಲಿ ಸಮ್ಯಗ್ದರ್ಶನ - ಜ್ಞಾನ - ಚಾರಿತ್ರಗಳ ಹುಚ್ಚು ಹಿಡಿದಿದೆ ಅಂಥ ಧರ್ಮಾತ್ಮನಿಗೆ ಬಾಹ್ಯದಲ್ಲಿ ನೆಮ್ಮದಿಯೆನಿಸುವುದಿಲ್ಲ, ರುಚಿಯೆನಿಸುವುದಿಲ್ಲ, ವ್ಯಾಪಾರ - ಉದ್ಯೋಗ, ಮನೋರಂಜನೆ, ಪ್ರಸಿದ್ಧಿ, ಎಲ್ಲಿಯಾದರೂ ಹೋಗುವುದು, ಯಾರೊಡನಾದರೂ ಮಾತುಕತೆ ಮಾಡುವುದು ಇವೇ ಮೊದಲಾದ ಯಾವುದರಲ್ಲಿಯೂ ಮನಸ್ಸು ತೊಡಗುವುದಿಲ್ಲ. ಕೇವಲ ಓರ್ವ ಆತ್ಮನ ಹುಚ್ಚು ಹಿಡಿದಿರುತ್ತದೆ. ಅವನು ತನ್ನ ಅಂತರ್ಯದ ಸ್ವಭಾವದಲ್ಲಿ ವಿಶೇಷ ಲೀನತೆಯ ಸಲುವಾಗಿ ಮನೆ - ಮಾರು, ಬಟ್ಟೆ-ಬರೆ ಮೊದಲಾದ ಬಾಹ್ಯ ಸಂಯೋಗಗಳ ತ್ಯಾಗ ಮಾಡುತ್ತಾನೆ. ಆಗ ಅವನನ್ನು ಜಗತ್ತು ನಿರ್ಗ್ರಂಥನೆಂದು ಹೇಳುತ್ತದೆ.

ಮಾಲವ ದೇಶದ ಅಧಿಪತಿಯಾದ ದೊರೆ ಭರ್ತೃಹರಿಯು ತನ್ನ ಪ್ರಾಣಕ್ಕಿಂತಲೂ ಪ್ರಿಯಳಾದ ಮಹಾರಾಣಿ ಪಿಂಗಳೆಯ ಮಾಯಾಚಾರವನ್ನು ಯಾವಾಗ ತಿಳಿಯುತ್ತಾನೆ. ಆಗ ಅವನಿಗೆ ಎಂಥ ವೈರಾಗ್ಯ ಬಂದಿರಬೇಕು ! ಅದೇ ಪ್ರಕಾರ ನಾಲ್ಕನೆಯ ಗುಣಸ್ಥಾನದಲ್ಲಿರುವ ಧರ್ಮಾತ್ಮನಿಗೆ ಸಂಪೂರ್ಣ ಜಗತ್ತಿನ ಕುರಿತು ಅಂತರ್ಯದಲ್ಲಿ ನಿಜವಾದ ವೈರಾಗ್ಯವು ಪ್ರಕಟವಾಗಿ ಹೋಗುತ್ತದೆ.

ಪ್ರಭು ! ನಿನಗೆ ನಿನ್ನ ಮಹಿಮೆಯ ಪ್ರಜ್ಞೆಯೇ ಇಲ್ಲ. ಅನಂತ ..... ಅನಂತ ..... ಅತೀಂದ್ರಿಯ ಆನಂದದ ಪ್ರವಾಹವು ಪರ್ಯಾಯದಲ್ಲಿ ಅನಂತಕಾಲದವರೆಗೆ ಪ್ರವಹಿಸಿದರು ಕೂಡ ಎಂದೂ ಸಮಾಪ್ತವಾಗದಂಥ ಅನಂತ ಅತೀಂದ್ರಿಯ ಆನಂದದ ಮಹಾಸಾಗರನು ನೀನು ಸ್ವಯಂ ಇರುವೆ. ಅಯ್ಯಾ ಸೋದರನೇ ! ಇಂಥ ಆತ್ಮನ ದೃಷ್ಟಿಯು ಒಂದು ಬಾರಿ ಪ್ರಕಟವಾದರೆ ಶ್ರದ್ಧೆ - ಜ್ಞಾನದಲ್ಲಿರುವ ರಾಗವು ನಾಶವಾಗಿ ಹೋಗುತ್ತದೆ. ಚಾರಿತ್ರದಲ್ಲಿ ರಾಗವು ಬರುತ್ತದೆ, ಆದರೆ ಜ್ಞಾನಿಗಳು ಅದನ್ನು ಒಂದು ಕೃಷ್ಣ ಸರ್ಪದ ಸಮಾನವಾಗಿ ತಿಳಿದುಕೊಂಡು ಅದರ ತ್ಯಾಗ ಮಾಡುತ್ತಾರೆ. ಮತ್ತು ಸ್ವರೂಪದಲ್ಲಿ ವಿಶೇಷ ಸ್ಥಿರತೆಯ ಸಲುವಾಗಿ - ಸ್ವಾನುಭವದ ಸಲುವಾಗಿ ಇನ್ನೂ ಹೆಚ್ಚು ಅಭ್ಯಾಸ ಮಾಡುವುದಕ್ಕೋಸ್ಕರ ಮುನಿತನದ ಅಂಗೀಕಾರ ಮಾಡುತ್ತಾರೆ. ಮುನಿದಶೆಯಲ್ಲಿ ಹೆಚ್ಚು - ಹೆಚ್ಚಾಗಿ ವೀತರಾಗತೆಯ ವೃದ್ಧಿಯಾಗುತ್ತದೆ.

ಆತ್ಮನು ಯಾವಾಗ ಉಗ್ರ ಪುರುಷಾರ್ಥ ಮಾಡಿ ಸ್ವರೂಪದಲ್ಲಿ ಸ್ಥಿರಗೊಳ್ಳುವ ಸಲುವಾಗಿ ಪರಿಪೂರ್ಣ ಅಭ್ಯಾಸ ಮಾಡುತ್ತಾನೆ ಆಗ ಕೇವಲಜ್ಞಾನವು ಧಾವಿಸುತ್ತ ಬಂದು ಬಿಡುತ್ತದೆ. ಆತ್ಮಜ್ಞಾನದ ಉಗ್ರತೆಯು ಕೇವಲ ಜ್ಞಾನವನ್ನು ಕೂಗಿ ಕೂಗಿ ಕರೆಯುತ್ತದೆ.

ಈ ಗಾಥೆಯಲ್ಲಿ ಸಮ್ಯಗ್ದರ್ಶನ, ಮುನಿದಶೆ ಮತ್ತು ಕೇವಲಜ್ಞಾನ ಈ ಮೂರರ ಭೂಮಿಕೆಯ ಮಾತು ಬಂದು ಬಿಟ್ಟಿತು.

ಈಗ ರತ್ನತ್ರಯಯುಕ್ತ ಜೀವನೇ ಉತ್ತಮ ತೀರ್ಥನಿದ್ದಾನೆಂಬ ಮಾತನ್ನು ಹೇಳುತ್ತಾರೆ -

**ರಯಣತ್ತಯ-ಸಂಜುತ್ತ ಜಿಉ ಉತ್ತಿಮು ತಿತ್ಥು ಪವಿತ್ತು**
**ಮೋಕ್ಖಹ ಕಾರಣ ಜೋಇಯಾ ಅಣ್ಣು ಣ ತಂತು ಣ ಮಂತು ॥83॥**

**ರತ್ನತ್ರಯಮಯ ಜೀವನೆ ತಾ ಉತ್ತಮ ಪಾವನ ತೀರ್ಥನಿಹ**
**ಯತ್ನವೆ ಮೋಕ್ಷದ ಕಾರಣ ಋಷಿ ಮಂತ್ರ-ತಂತ್ರಗಳು ಬೇರಿಲ್ಲ ॥83॥**

**ಅರ್ಥ :-** ಎಲೈ ಯೋಗಿಯೇ ! ರತ್ನತ್ರಯ ಸಹಿತನಾದ ಜೀವನು ಉತ್ತಮ ಮತ್ತು ಪವಿತ್ರನಾದ ತೀರ್ಥ-ನಿದ್ದಾನೆಂಬುದೇ ಮೋಕ್ಷದ ಉಪಾಯವಿದೆ. ಇದನ್ನು ಹೊರತು ಪಡಿಸಿ ಉಳಿದ ಯಾವ ಮಂತ್ರ - ತಂತ್ರಗಳಿಲ್ಲ.

ಆಚಾರ್ಯ ಯೋಗೀಂದು ದೇವರೆಂಬ ಹೆಸರಿನ ನಗ್ನ ದಿಗಂಬರ ಮಹಾ ಮುನಿರಾಜರು ಇಂದಿಗೆ ಸುಮಾರು ಸಾವಿರದಾನಾನೂರು ವರುಷಗಳ ಮೊದಲು ಆಗಿ ಹೋಗಿದ್ದಾರೆ. ಕಾನನದಲ್ಲಿ ಯಾವ ಪ್ರಕಾರ ಸಿಂಹವು ಗರ್ಜನೆ ಮಾಡುತ್ತ ವಿಹರಿಸುತ್ತದೆ ಅದೇ ಪ್ರಕಾರ ದಿಗಂಬರ ಸಂತರು ಆತ್ಮನ ಮಸ್ತಿಯಿಂದ ಗರ್ಜನೆ ಮಾಡುತ್ತ ಹೀಗೆ ಹೇಳುತ್ತಾರೆ. ರತ್ನತ್ರಯ ಯುಕ್ತನಾದ ಜೀವನೇ ನಿಜವಾಗಿ ಉತ್ತಮ ತೀರ್ಥನಿದ್ದಾನೆ. ಅವನನ್ನು ಹೊರತು ಪಡಿಸಿ ಸಮ್ಮೇದಶಿಖರ, ಗಿರಿನಾರ, ಶತ್ರುಂಜಯ ಮೊದಲಾದ ತೀರ್ಥಗಳೆಲ್ಲವೂ ಶುಭ ಭಾವದಲ್ಲಿ ನಿಮಿತ್ತವಿವೆ. ಅವುಗಳಿಂದ ಮಾತ್ರ ಶುಭ ಭಾವಗಳಾಗುತ್ತವೆ. ಆದರೆ ಧರ್ಮವೆಂದೂ ಆಗುವುದಿಲ್ಲ. ಭವಸಾಗರದಿಂದ ದಡ ತಲುಪಿಸುವಂಥ ತೀರ್ಥವೆಂದರೆ ನಿಜ ಶುದ್ಧಾತ್ಮನ ದರ್ಶನ, ಜ್ಞಾನ ಮತ್ತು ಚಾರಿತ್ರವೇ ಇದೆ. ಅದನ್ನು ಹೊರತುಪಡಿಸಿ ಬೇರೆ ಯಾವ ಉಪಾಯವೇ ಇಲ್ಲ.

ನಿಶ್ಚಯ ರತ್ನತ್ರಯವೇ ಪ್ರತ್ಯಕ್ಷ ತೀರ್ಥವಿದೆ, ಉತ್ತಮ ತೀರ್ಥವಿದೆ, ಪವಿತ್ರ ತೀರ್ಥವಿದೆ. ಆ ತೀರ್ಥದ ಯಾತ್ರೆ ಮಾಡುವುದರಿಂದಲೇ ಜನ್ಮ - ಮರಣಗಳು ನಾಶವಾಗಿ ಮುಕ್ತಿಯ ಪ್ರಾಪ್ತಿಯಾಗುತ್ತದೆ. ಇದನ್ನು ಬಿಟ್ಟು ಬೇರೆ ಯಾವುದೂ ಮುಕ್ತಿಯ ಉಪಾಯವಿಲ್ಲ. ಮುಕ್ತಿಯ ಉಪಾದಾನ ಕಾರಣವೆಂದರೆ ಶುದ್ಧಾತ್ಮನ ಶ್ರದ್ಧೆ - ಜ್ಞಾನ - ಚಾರಿತ್ರರೂಪದ ರತ್ನತ್ರಯವೇ ಇದೆ.

ಭಗವಾನ ಆತ್ಮನು ಸ್ವಯಂ ಜ್ಞಾನ ಚೇತನಾಮಯನಿದ್ದಾನೆ. ಜ್ಞಾನ ಸ್ವರೂಪದ ಅನುಭವವು ಅದು ಜ್ಞಾನ ಚೇತನಾವಿದೆ. ರಾಗ ಮೊದಲಾದವುಗಳ ಅನುಭವವು ಅದು ಅಜ್ಞಾನ ಚೇತನಾವಿದೆ. ನಿರಾಕುಲನಾದ ಭಗವಾನ ಆತ್ಮನ ದೃಢ ಶ್ರದ್ಧೆಯಾಗುವುದು ಅದು ನಿಶ್ಚಯ ಸಮ್ಯಗ್ದರ್ಶನವಿದೆ. ಅದು ಆತ್ಮನ ಭೂಮಿಕೆಯಲ್ಲಿಯೇ ಆತ್ಮನ ಆಶ್ರಯದಿಂದಲೇ ಪ್ರಕಟವಾಗುತ್ತದೆ. ರಾಗದ ಭೂಮಿಕೆಯಲ್ಲಿ ಸಮ್ಯಗ್ದರ್ಶನವು ಪ್ರಕಟವಾಗುವುದಿಲ್ಲ.

ಆತ್ಮನ ಜ್ಞಾನವು ಅದು ಸಮ್ಯಕ್ ಜ್ಞಾನವಿದೆ ಮತ್ತು ಆತ್ಮನ ಆಶ್ರಯದಿಂದ ಆತ್ಮನಲ್ಲಿ ಆಗುವ ಸ್ಥಿರತೆಯ ಹೆಸರು ಅದು ಸಮ್ಯಕ್ಚಾರಿತ್ರವಿದೆ. ಈ ನಿಶ್ಚಯ ರತ್ನತ್ರಯ ಸ್ವರೂಪದ ತೀರ್ಥವೇ ಉತ್ತಮ ತೀರ್ಥವಿದೆ, ಶಾಶ್ವತ ತೀರ್ಥವಿದೆ. ಸಮ್ಯಗ್ದರ್ಶನ - ಜ್ಞಾನ - ಚಾರಿತ್ರರೂಪದ ಮೂರು ಧರ್ಮಸಹಿತನಾದ ಈ ಆತ್ಮನೇ ಉತ್ತಮ ತೀರ್ಥನಿದ್ದಾನೆ. ಆತ್ಮರೂಪದ ಜಹಜನ್ನು ಆತ್ಮರೂಪದ ಸಾಗರದಲ್ಲಿ ಸಾಗಿಸುತ್ತ - ಸಾಗಿಸುತ್ತ ಆತ್ಮನು ಮೋಕ್ಷದ್ವೀಪದಲ್ಲಿ ತಲುಪಿ ಬಿಡುತ್ತಾನೆ. ಮುಕ್ತಿಯನ್ನು ಪಡೆಯುತ್ತಾನೆ.

ದಿಗಂಬರ ಸಂತರು ತತ್ತ್ವಗಳ ಮಂಥನ ಮಾಡಿ ಸಂಪೂರ್ಣ ಸಾರವನ್ನು ತೆಗೆದಿರಿಸಿದ್ದಾರೆ. ಯೋಗಸಾರವು ಇದು ಪರ್ಯಾಯವಿದ್ದರೂ ಇದರ ವಿಷಯವು ತ್ರಿಕಾಲ ಧ್ರುವ - ಶಾಶ್ವತ ಶುದ್ಧ ಸತ್ ವಸ್ತುವಿದೆ. ಅದನ್ನು ಧ್ಯೇಯ ಮಾಡಿಕೊಂಡು ಅದರ ಶ್ರದ್ಧೆ, ಜ್ಞಾನ ಮತ್ತು ಸ್ಥಿರತೆ ಮಾಡುವುದನ್ನು ಯೋಗಸಾರವೆಂದು ಹೇಳಲಾಗಿದೆ.

ಈಗ ಆಚಾರ್ಯ ಭಗವಂತರು ರತ್ನತ್ರಯದ ಸ್ವರೂಪ ಹೇಳುತ್ತಾರೆ -

ದಂಸಣು ಜಂ ಪಿಚ್ಛಿಯಇ ಬುಹ ಅಪ್ಪಾ ವಿಮಲ ಮಹಂತು
ಪುಣು ಪುಣು ಅಪ್ಪಾ ಭಾವಿಯಏ ಸೋ ಚಾರಿತ್ತ ಪವಿತ್ತು ॥84॥

**ಆತ್ಮನು ನಿರ್ಮಲ ಮಹನೆಂಬ ನಂಬುಗೆ ಸಮ್ಯಕ್‌ದರ್ಶನಿದೆ**
**ಆತ್ಮನ ಜ್ಞಾನವೆ ಜ್ಞಾನವಿದೆ ಆತ್ಮನ ಭಾವನೆ ಚರಿತವಿದೆ ॥84॥**

**ಅರ್ಥ :-** ಈ ಆತ್ಮನು ಮಲರಹಿತ ಶುದ್ಧ ಮತ್ತು ಮಹಾನ ಪರಮಾತ್ಮನಿದ್ದಾನೆಂದು ಶ್ರದ್ಧೆ ಮಾಡುವುದು ಅದು ಸಮ್ಯಗ್ದರ್ಶನವಿದೆ, ಮತ್ತು ಹಾಗೆ ತಿಳಿದುಕೊಳ್ಳುವುದು ಅದು ಜ್ಞಾನವಿದೆ. ಪುನಃ ಪುನಃ ಆ ಆತ್ಮನ ಭಾವನೆ ಮಾಡುವುದು ಅದು ಪವಿತ್ರವಾದ ಶುದ್ಧ ನಿಶ್ಚಯ ಚಾರಿತ್ರವಿದೆ.

ಈ ಆತ್ಮನು ಮಲರಹಿತ - ದೋಷರಹಿತ ವಿಮಲ ಮತ್ತು ಮಹಾನನಿದ್ದಾನೆ. ಒಂದು ಸಮಯದಲ್ಲಿ ಅನಂತ ಪರಮಾತ್ಮ ದಶೆಯು ನಿನ್ನ ಗರ್ಭದಲ್ಲಿ ಸದಾ ಬಿದ್ದು ಕೊಂಡಿರುವಂಥ ಧ್ರುವ - ಶಾಶ್ವತ ಭಗವಂತನು ಸ್ವಯಂ ಇರುವೆ. ಅವನನ್ನು ನೋಡುವುದು ಎಂದರೆ ಅವನ ಶ್ರದ್ಧೆ ಮಾಡುವುದು ಅದು ಸಮ್ಯಗ್ದರ್ಶನವಿದೆ. ಹೇಗೆ ನೋಡುವುದು - ಶ್ರದ್ಧೆ ಮಾಡುವುದೆಂದರೆ ಪರಸನ್ಮುಖತೆಯನ್ನು ತ್ಯಜಿಸಿ, ಭೇದದ ವಿಕಲ್ಪವನ್ನು ಬಿಟ್ಟುಕೊಟ್ಟು ಸ್ವಸನ್ಮುಖತೆಯೊಡನೆ ಆತ್ಮನನ್ನು ನೋಡುವುದರ - ಶ್ರದ್ಧೆ ಮಾಡುವುದರ ಹೆಸರು ಸಮ್ಯಗ್ದರ್ಶನವಿದೆ. ತನ್ನ ಆತ್ಮನನ್ನು ಜ್ಞೇಯ ಮಾಡಿಕೊಂಡು ಅವನ ಯಥಾರ್ಥ ಜ್ಞಾನ ಮಾಡಿಕೊಳ್ಳುವುದು ಅದು ಸಮ್ಯಕ್‌ಜ್ಞಾನವಿದೆ.

ಭಗವಾನ ಆತ್ಮನು ಅನಂತಗುಣ ಸ್ವರೂಪಿಯಿದ್ದಾನೆ ಮತ್ತು ಅಸಂಖ್ಯಾತ ಪ್ರದೇಶಿಯಿದ್ದಾನೆ. ಆದರೆ ಅವನಲ್ಲಿ ಗುಣದ ಅಥವಾ ಪ್ರದೇಶದ ಭೇದವಿಲ್ಲ, ಅವನು ನಿಜವಾಗಿ ಏಕರೂಪ ಅಖಂಡನಿರುವುದರಿಂದ ಅವನನ್ನು ನೋಡುವ ದೃಷ್ಟಿಯು ಕೂಡ ಏಕರೂಪವಿದ್ದಾಗಲೇ ಆತ್ಮನ ದರ್ಶನವಾಗುತ್ತದೆ - ಆತ್ಮನ ಶ್ರದ್ಧೆಯಾಗುತ್ತದೆ. ಅನ್ಯಥಾ ಆಗುವುದಿಲ್ಲ.

ಆತ್ಮನು ಮಹಾನ ಪದಾರ್ಥನಿದ್ದಾನೆ, ಅವನ ಒಂದೊಂದು ಗುಣವೂ ಮಹಾನವಿದೆ. ಅನಂತ ಶಕ್ತಿಯ ಧಾರಕನಾದಂಥ ಅನಂತ ಶಕ್ತಿಯ - ಅನಂತ ಗುಣಗಳ ಅಖಂಡ ಪಿಂಡನಾದಂಥ ಆತ್ಮನು ಮಹಾನನೇ ಇರುವನಲ್ಲವೇ ಭಗವಂತರು ಪ್ರತಿಯೊಬ್ಬ ಆತ್ಮನನ್ನು ಹೀಗೆಯೇ ಅಸಂಖ್ಯ ಪ್ರದೇಶಿ ಅನಂತಗುಣಸ್ವರೂಪವಾಗಿಯೇ ನೋಡಿದ್ದಾರೆ. ಇಂಥ ತನ್ನ ಆತ್ಮನ ಶ್ರದ್ಧೆ - ಜ್ಞಾನ ಮತ್ತು ಸ್ಥಿರತೆ ಮಾಡಬೇಕಾಗುವುದನ್ನು ಭಗವಂತರು ಸಮ್ಯಗ್ದರ್ಶನ - ಜ್ಞಾನ - ಚಾರಿತ್ರವೆಂದು ಅಪ್ಪಣೆ ಕೊಡಿಸಿದ್ದಾರೆ .

ಜ್ಞಾನ ಸ್ವರೂಪನಾದ ಆತ್ಮನ ಆ ಜ್ಞಾನ ಪರ್ಯಾಯವು ತನ್ನ ಸ್ವರೂಪದ ಜ್ಞಾನ ಮಾಡುವುದು ಅದು ಸಮ್ಯಕ್‌ಜ್ಞಾನವಿದೆ. ಶಾಸ್ತ್ರದ ಜ್ಞಾನವು ಅದು ಜ್ಞಾನವಲ್ಲ, ಅದಂತೂ ಪರಸತ್ತಾವಲಂಬಿಯಾದ ಜ್ಞಾನವಿದೆ. ಸ್ವಸತ್ತಾವಲಂಬಿಯಾದ ಜ್ಞಾನವು ಅದು ಸ್ವರೂಪದೊಳಗಿಂದ ಪ್ರಕಟವಾಗುತ್ತದೆ, ಅದುವೇ ನಿಜವಾದ ಜ್ಞಾನವಿದೆ; ತನ್ನ ಜ್ಞಾನವಿದೆ.

ಯಾವ ಅಭೇದ - ಅಖಂಡ - ಏಕರೂಪನಾದ ಆತ್ಮನನ್ನು ದೃಷ್ಟಿಯಲ್ಲಿ - ಜ್ಞಾನದಲ್ಲಿ ತೆಗೆದುಕೊಳ್ಳಲಾಗಿತ್ತು. ಅದೇ ಶುದ್ಧ ಪೂರ್ಣಾನಂದ ಸ್ವರೂಪನಾದ ಆತ್ಮನಲ್ಲಿ ಸ್ಥಿರತೆ - ಲೀನತೆ ಮಾಡುವುದು ಎಂದರೆ ಅತೀಂದ್ರಿಯ ಆನಂದದ ಅನುಭವ ಮಾಡಿಕೊಳ್ಳುವುದನ್ನು ಸರ್ವಜ್ಞ ದೇವರು ಯಥಾರ್ಥ ಚಾರಿತ್ರವೆಂದು ಹೇಳಿದ್ದಾರೆ. ಅದುವೇ ನಿಜವಾದ ಮತ್ತು ಪವಿತ್ರವಾದ ಚಾರಿತ್ರವಿದೆ.

ಅಸಂಖ್ಯ ಪ್ರದೇಶಿಯಾದ ಆತ್ಮನು ಕ್ಷೇತ್ರದಿಂದ ಬೇಕಾದಷ್ಟು ಚಿಕ್ಕವ ಅಥವಾ ದೊಡ್ಡವನಾಗಿರಲಿ, ಆದರೆ ಅವನು ಭಾವದಿಂದ ಮಹಾನನಿದಾನೆ. ಈ ಅನಂತ ಗುಣ ಸ್ವರೂಪನಾದ ಆತ್ಮನಲ್ಲಿ ನಿಮಗ್ನತೆ ಮಾಡುವುದು ಅದು ಚಾರಿತ್ರವಿದೆ. ಈ ಚಾರಿತ್ರವೇ ನಿಜವಾಗಿ ಮೋಕ್ಷದ ಮಾರ್ಗವಿದೆ. ಮತ್ತು ಈ ಚಾರಿತ್ರದ ಕಾರಣವು ಸಮ್ಯಗ್ದರ್ಶನ - ಜ್ಞಾನವಿದೆ. ಆದುದರಿಂದ ಸಮ್ಯಗ್ದರ್ಶನ - ಜ್ಞಾನ - ಚಾರಿತ್ರದ ಏಕತೆಯು ಅದು ಮೋಕ್ಷಮಾರ್ಗವಿದೆ.

ಭಗವಾನ ಆತ್ಮನು ಅನಂತ ಗುಣಗಳ ಪಿಂಡನಿದ್ದಾನೆ. ಈ ಗುಣಗಳ ಸ್ವಭಾವವು ಪರಿಣಮನ ಮಾಡುವುದು ಅದು ದ್ರವ್ಯದ ಧರ್ಮವಿದೆ - ದ್ರವ್ಯದ ಪರ್ಯಾಯದ ಧರ್ಮವಿದೆ. ಪರಿಣಮನದ ಶಕ್ತಿಯಿಂದ ಪರ್ಯಾಯದ ಪರಿಣಮನವಾಗುತ್ತದೆ ಅದು ದ್ರವ್ಯದ ಪರ್ಯಾಯಧರ್ಮವಿದೆ. ಅದು ವ್ಯವಹಾರದ ವಿಷಯವಿದೆ. ಆದುದರಿಂದ

ಅದು ಆಶ್ರಯ ಮಾಡಲು ಯೋಗ್ಯವಾಗಿಲ್ಲ. ವ್ಯವಹಾರದ ವಿಷಯವೇ ಇಲ್ಲವೆನ್ನುವಂತಿಲ್ಲ, ವಿಷಯವಂತೂ ಇದೆ, ಆದರೆ ಅದು ಆದರಿಸಲು ಯೋಗ್ಯವಾಗಿಲ್ಲ.

ಹದಿನಾಲ್ಕು ಗುಣಸ್ಥಾನ, ಮಾರ್ಗಣಾಸ್ಥಾನ ಮೊದಲಾದವುಗಳ ಪರ್ಯಾಯಗಳು ಆಶ್ರಯ ಮಾಡಲು ಯೋಗ್ಯವಿಲ್ಲದಿರುವುದರಿಂದ ಅವನ್ನು ವ್ಯವಹಾರವೆಂದು ಹೇಳಿದೆ. ಪರ್ಯಾಯವನ್ನು ಗೌಣ ಮಾಡಿ ವ್ಯವಹಾರವೆಂದು - ಅಭೂತಾರ್ಥವೆಂದು ಹೇಳಿದೆ. ಮತ್ತು ದ್ರವ್ಯದ ಪೂರ್ಣ ಧ್ರುವ ಸ್ವರೂಪವನ್ನು ಮುಖ್ಯ ಮಾಡಿ ನಿಶ್ಚಯವೆಂದು ಮತ್ತು ಭೂತಾರ್ಥವೆಂದು ಹೇಳಿದೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳು ಮೋಕ್ಷಮಾರ್ಗ ರೂಪದ ಪರ್ಯಾಯಗಳಿವೆ. ಪರ್ಯಾಯವೇ ಇಲ್ಲ-ಪರಿಣಮನವೇ ಇಲ್ಲವೆಂದು ಮನ್ನಿಸಿದರೆ ಮೋಕ್ಷಮಾರ್ಗದ ಅಭಾವವಾಗಿ ಹೋಗುವುದು, ಆದರೆ ಹಾಗೆ ಇಲ್ಲ, ಪರ್ಯಾಯಗಳಿವೆ, ಆದರೆ ಅವುಗಳ ಲಕ್ಷ್ಯ ಮಾಡುವುದರಿಂದ ಜೀವದ ಪ್ರಯೋಜನದ ಸಿದ್ಧಿಯಾಗುವುದಿಲ್ಲ, ಆದುದರಿಂದ ಅದನ್ನು ಗೌಣ ಮಾಡಿ ವ್ಯವಹಾರವೆಂದು - ಅಭೂತಾರ್ಥವೆಂದು ಹೇಳಿದೆ. ಮತ್ತು ತ್ರಿಕಾಲ ಧ್ರುವ ಸ್ವಭಾವದ ಆಶ್ರಯ ತೆಗೆದುಕೊಳ್ಳುವುದರಿಂದ ಪ್ರಯೋಜನದ ಸಿದ್ಧಿಯಾಗುತ್ತದೆ. ಆದುದರಿಂದ ಸ್ವಭಾವವನ್ನು ಮುಖ್ಯ ಮಾಡಿ ಭೂತಾರ್ಥವೆಂದು ಹೇಳಿದೆ.

ಜೀವದ ಪ್ರಯೋಜನವು ಶಾಂತಿ ಮತ್ತು ಆನಂದವಿದೆ ಮತ್ತು ಅದು ಸಮ್ಯಗ್ದರ್ಶನ - ಜ್ಞಾನ - ಚಾರಿತ್ರದಿಂದ ಪ್ರಕಟವಾಗುತ್ತದೆ.

ಭಗವಾನ ಆತ್ಮನು ಅನಾದಿ - ಅನಂತ ಸ್ವಯಂ ಸಿದ್ಧವಸ್ತುವಿದ್ದಾನೆ. ಜನ್ಮ - ಮರಣಗಳಿಂದ ರಹಿತನಿದ್ದಾನೆ. ಜಗತ್ತಿನಲ್ಲಿ ಸಂಖ್ಯೆಯ ಅಪೇಕ್ಷೆಯಿಂದ ಅನಂತ ಜೀವರುಗಳಿದ್ದಾರೆ. ಅವರೆಲ್ಲರು ಜಾತಿಯ ಅಪೇಕ್ಷೆಯಿಂದ ಸಮಾನರಿದ್ದಾರೆ. ಆಲೂಗಡ್ಡೆಯ ಅತ್ಯಂತ ಚಿಕ್ಕದಾದ ತುಂಡಿನಲ್ಲಿ ಅನಂತ ಜೀವಗಳಿವೆ ಎಂದರೆ ಇಂದಿನವರೆಗೆ ಎಷ್ಟು ಸಿದ್ಧರಾಗಿದ್ದಾರೆ ಅವರಿಗಿಂತ ಅನಂತ ಗುಣಿತ ಅಧಿಕ ಜೀವಗಳಿವೆ. ಅವೆಲ್ಲ ಜೀವಗಳು ಸ್ವಭಾವದಿಂದ ಸಮಾನವಿವೆ ಮತ್ತು ಪ್ರತಿಯೊಂದು ಜೀವದ ಸತ್ತಾ ಭಿನ್ನ ಭಿನ್ನವಿದೆ. ಸ್ವತಂತ್ರವಿದೆ.

ಎಲೈ ಸೋದರನೇ ! ಹೀಗೆ ಅನಂತಾನಂತ ಪರದ್ರವ್ಯಗಳ ಸತ್ತಾ ಮತ್ತು ಸ್ವಯಂ ನಿನ್ನ ಸತ್ತಾವನ್ನು ಒಂದು ಸಲ ಸ್ವೀಕಾರ ಮಾಡುವ ಸಾಮರ್ಥ್ಯವು ನಿನ್ನ ಒಂದು ಸಮಯದ ಪರ್ಯಾಯದಲ್ಲಿದೆ, ನೀನು ಅದರ ಸ್ವೀಕಾರ ಮಾಡು!

ಭಗವಾನ ಆತ್ಮನು ಯಾವುದೇ ಪರದ್ರವ್ಯದ ಕಾರ್ಯ ಮಾಡುವುದಿಲ್ಲ ಮತ್ತು ಯಾವುದೇ ಪರದ್ರವ್ಯದ ಕಾರ್ಯದ ಕಾರಣನೂ ಇಲ್ಲ, ಅವನಲ್ಲಿ ಇಂಥ ಒಂದು ಅಕಾರ್ಯಕಾರಣ ಶಕ್ತಿಯಿದೆ. ಆದರಿಂದಾಗಿ ಅವನ ಸಮಸ್ತ ಗುಣಗಳು ಕೂಡ ಅಕಾರ್ಯಕಾರಣ ಸ್ವರೂಪವಿವೆ.

ಅಧ್ಯಾತ್ಮದಲ್ಲಿ ಅಂತರ್ಯದ ಮಾತುಗಳನ್ನು ಗ್ರಹಣ ಮಾಡುವ ಸಲುವಾಗಿ ಬಹಳಷ್ಟು ಪುರುಷಾರ್ಥವು ಬೇಕಾಗುವುದು. ಇವಂತೂ ಸರ್ವಜ್ಞ ಭಗವಂತರ ಮನೆಯ ಮಾತುಗಳಿದ್ದು ಇವನ್ನು ತಿಳಿದುಕೊಳ್ಳುವ ಸಲುವಾಗಿ ತೀವ್ರ ಪುರುಷಾರ್ಥವು ಬೇಕಾಗುವುದು. ಧರ್ಮವೇನು ಸಾಧಾರಣ ವಸ್ತುವಿಲ್ಲ, ಇದರ ಫಲದಲ್ಲಿ ಕಳೆದುಹೋದ ಭೂತಕಾಲಕ್ಕಿಂತಲೂ ಅನಂತ ಗುಣಿತವಾದ ಭವಿಷ್ಯಕಾಲದ ಪರ್ಯಾಯಗಳಲ್ಲಿ ಅತೀಂದ್ರಿಯ ಆನಂದದ ಫಲವು ದೊರಕುವಂಥ ಧರ್ಮದ ಮಾತನ್ನೇನು ಹೇಳುವುದು? ಮತ್ತು ಇಂಥ ಧರ್ಮವು ಯಾವುದರ ಆಶ್ರಯದಿಂದ ಪ್ರಕಟವಾಗುವುದು ಆ ದ್ರವ್ಯದ ಮಾತನ್ನೇನು ಹೇಳುವುದು? ಅದರ ಮಹಿಮೆಯು ಸೀಮಾತೀತವಿದೆ.

ಆದರೇನು ಮಾಡುವುದು ! ಅಜ್ಞಾನಿ ಜೀವನಿಗೆ ತನ್ನ ಸ್ವತಂತ್ರ ಮಹಾನ ಸತ್ತಾದ ಮಾತು ರುಚಿಸುವುದೇ ಇಲ್ಲ, ಅನಾದಿ ಕಾಲದಿಂದ ತನ್ನನ್ನು ಶಕ್ತಿಹೀನನೆಂದು ನಂಬಿ ಪರಾಧೀನ ದಶೆಯಲ್ಲಿಯೇ ಉಳಿದಿರುವುದರಿಂದ ಸ್ವತಂತ್ರತೆಯು ರುಚಿಸುವುದಿಲ್ಲ, ಆದರೆ ಪ್ರಿಯ ಮಹಾನುಭಾವನೇ ! ನೀನಂತೂ ಸಿಂಹನಂತೆ ಮಹಾಪರಾಕ್ರಮಿಯಿರುವೆ;ನಿನಗೆ ಈ ಪರಾಧೀನತೆಯು - ಈ ಹೇಡಿತನವು ಶೋಭಿಸುವುದಿಲ್ಲ.

ಆತ್ಮನು ಸ್ವಭಾವದಿಂದ ಅಕರ್ತೃ ಮತ್ತು ಅಭೋಕ್ತೃ ಇದ್ದಾನೆ. ಆತ್ಮನು ಪರದ ಕರ್ತಾ - ಭೋಕ್ತಾನಂತೂ ಇಲ್ಲವೇ ಇಲ್ಲ. ಇಷ್ಟೇ ಏಕೆ ಆತ್ಮನು ಸ್ವಭಾವದಿಂದ ಕೂಡ ರಾಗದ ಕರ್ತಾ - ಭೋಕ್ತಾ ಇಲ್ಲ, ಸೋದರನೇ ! ಮಾತು ಅದ್ಭುತವಿದ್ದು ಅವಶ್ಯವಾಗಿ ತಿಳಿದುಕೊಳ್ಳುವಂತಿದೆ.

ಆತ್ಮನು ರಾಗ ಮಾಡುತ್ತಾನೆನ್ನಬೇಕಾದರೆ ರಾಗವು ಆತ್ಮನ ಸ್ವಭಾವದ ಗಣಿಯಲ್ಲಿ ಬಿದ್ದುಕೊಂಡಿದೆಯೇನು, ರಾಗವು ಆತ್ಮನ ಶಕ್ತಿಯಲ್ಲಿ ವಾಸ ಮಾಡಿದೆಯೇನು? ನಿಜವಾಗಿ ಆತ್ಮನು ರಾಗದ ಕರ್ತೃವಾಗಿದ್ದರೆ ಇಡೀ ದ್ರವ್ಯವು ವಿಕಾರಿಯಾಗಿ ಹೋಗಬೇಕಾಗುವುದು ಆದರೆ ಹಾಗೆ ಇಲ್ಲ. ಆದುದರಿಂದ ಆತ್ಮನು ರಾಗದ ಕರ್ತೃವಿಲ್ಲವೆಂಬುದು ತಾನೇ ಸಿದ್ಧವಾಗಿ ಬಿಡುತ್ತದೆ.

ವಸ್ತುವಿನ ಸ್ವರೂಪವು ಹೇಗೆ ಇದೆ ಹಾಗೆ ಸರ್ವಜ್ಞ ದೇವರು ತಿಳಿಸಿದ್ದಾರೆ; ಅವರೇನು ರಚನೆ ಮಾಡಿಲ್ಲ. ಹೇಗೆ ಸ್ವರೂಪವಿದೆ ಹಾಗೆ ಸರ್ವಜ್ಞರು ತಿಳಿದುಕೊಂಡಿದ್ದಾರೆ, ಹೇಗೆ ತಿಳಿದುಕೊಂಡಿದ್ದಾರೆ ಹಾಗೆ ವಾಣಿಯಲ್ಲಿ ಬಂದು ಬಿಟ್ಟಿದೆ ಮತ್ತು ಹೀಗೆಯೇ ವಸ್ತುವಿನ ಸ್ವರೂಪವಿದೆ.

ಅಯ್ಯಾ ಸೋದರನೇ ! ನೀನು ಆತ್ಮನಿರುವೆಯಲ್ಲವೇ ! ನಿನ್ನಲ್ಲಿ ಮಹಾನ ಪವಿತ್ರತೆಯು ತುಂಬಿಕೊಂಡಿದೆ. ಆ ಪವಿತ್ರತೆಯ ರೂಪದಿಂದ ಪರಿಣಮಿಸಿ ಬಿಡು . ಈ ಪರಿಣಮನವು ವ್ಯವಹಾರವಿದ್ದರೆ ಧ್ರುವವು ಸ್ವಯಂ ನಿಶ್ಚಯವಿದೆ.

ಆತ್ಮನು ಒಂದು ರಜಕಣದ ಕರ್ತೃವು ಕೂಡ ಇಲ್ಲವೆಂದ ಮೇಲೆ ಅವನನ್ನು ಪರ ಜೀವಗಳನ್ನು ರಕ್ಷಿಸುವಂಥವನು, ದಯೆ ಪಾಲಿಸುವಂಥವನು ಅಥವಾ ಪರಜೀವಗಳನ್ನು ಕೊಲ್ಲುವಂಥವನೆಂದು ಹೇಗೆ ಹೇಳುವುದು? ಹೀಗೆ ಹೇಳುವುದೆಂದರೆ ಭಗವಾನ ಆತ್ಮನ ಸಲುವಾಗಿ ಕಲಂಕವಿದೆ. ಯಾವುದು ಸ್ವಭಾವವಿಲ್ಲ ಅದನ್ನು ಸ್ವಭಾವವೆಂದು ಮನ್ನಿಸುವುದೆಂದರೆ ನಿಜವಾಗಿ ಕಲಂಕವಿದೆ. ಈ ಕಲಂಕದ ಫಲವು ಅತ್ಯಂತ ಹಾನಿಕಾರಕವಿದೆ. ಅಯ್ಯಾ ಸೋದರನೇ ! ನೀನು ನಿನಗೆ ಹಾನಿಯಾಗುವಂಥದ್ದನ್ನೇಕೆ ಮನ್ನಿಸುತ್ತಿರುವೆ ?

ಸೋದರನೇ ! ಇವು ಭಗವಂತರ ಸ್ವದೇಶದ ಮಾತುಗಳಿವೆ. ಯಾರಿಗೆ ಪರದೇಶದಿಂದ ಹೊರಗೆ ಬಂದು ನಿಜ ದೇಶದಲ್ಲಿ ಹೋಗುವುದಿದೆ ಅವರ ಸಲುವಾಗಿ ಈ ಮಾತುಗಳಿವೆ. ಭಗವಾನ ಆತ್ಮನು ಅತೀಂದ್ರಿಯ ಆನಂದದ ರಸದಿಂದ ಪರಿಪೂರ್ಣವಾಗಿ ತುಂಬಿ ಹೋಗಿದ್ದಾನೆ. ಇಡೀ ಅಸಂಖ್ಯಾತ ಪ್ರದೇಶಗಳೆಲ್ಲವು ಅತೀಂದ್ರಿಯ ಆನಂದದಿಂದ ತುಂಬಿ ಹೋಗಿವೆ. ಅದರಲ್ಲಿ ಆನಂದವು ಒತ್ತೊತ್ತಾಗಿ ತುಂಬಿಕೊಂಡಿದೆ. ಅದರಲ್ಲಿ ಬೇರೆ ಯಾವುದರ ಪ್ರವೇಶದ ಸಲುವಾಗಿ ಅವಕಾಶವೇ ಇಲ್ಲ. ಆತ್ಮನು ನಿಜವಾಗಿ ಇಂಥ ಅತೀಂದ್ರಿಯ ಆನಂದದ ಭೋಕ್ತೃ ಇದ್ದಾನೆ. ಆದರೆ ಹೀಗೆ ಭೇದ ಮಾಡಿ ಹೇಳುವುದು ಅದು ಕೂಡ ವ್ಯವಹಾರವಿದೆ.

ಆತ್ಮನು ಎಂಥ ವಸ್ತುವಿದ್ದಾನೆ, ಅವನ ಮಹಿಮೆಯು ಯಾವ ಪ್ರಕಾರವಿದೆಯೆಂಬುದರ ಕುರಿತು ಅಜ್ಞಾನಿಯು ಅಂತರ್ಯದಿಂದ ವಿಚಾರವನ್ನೇ ಮಾಡಲಿಲ್ಲ, ಅಯ್ಯಾ ಸೋದರನೇ ! ನೀನು ಆತ್ಮನನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲ, ಆ ಆತ್ಮನ ಹೊಟ್ಟೆಯೊಳಗಿಂದ ಪರಮಾತ್ಮನ ಪ್ರಸವವಾಗುತ್ತದೆ. ಆತ್ಮನು ಪರಮಾತ್ಮನಪ್ರಸೂತಿಗೃಹನಿದ್ದಾನೆ. ಪರಮಾತ್ಮನ ಅನಂತ ಪರ್ಯಾಯಗಳು ಆತ್ಮನ ಉದರದಲ್ಲಿ ತುಂಬಿಕೊಂಡಿವೆ. ಯಾವಾಗ ಆತ್ಮನು ಸ್ವಭಾವದಲ್ಲಿ ಏಕಾಕಾರನಾಗುತ್ತಾನೆ ಆಗ ಒಂದರ ನಂತರ ಒಂದು ಪರಮಾತ್ಮನ ಪರ್ಯಾಯಗಳು ಪ್ರಕಟವಾಗಲಾರಂಭಿಸುತ್ತವೆ.

ಒಂದು ಪೂರ್ಣ ಶಾಶ್ವತವಾದ ನಿಜ ತತ್ತ್ವವನ್ನು ಪ್ರಾಪ್ತ ಮಾಡಿಕೊಂಡು ಇಂದೇ ಅವ್ಯಾಕುಲತೆಯಿಂದ ನರ್ತಿಸಿರಿ; ಇಂದೇ ಆತ್ಮನ ಅತೀಂದ್ರಿಯ ಆನಂದ ಅನುಭವಿಸಿರೆಂದು ಪ್ರವಚನಸಾರದ ಕೊನೆಯ ಗಾಥೆಯಲ್ಲಿ ಆಚಾರ್ಯ ಭಗವಂತರು ಹೇಳುತ್ತಾರೆ. ಅವರು ಇನ್ನೂ ಮುಂದುವರೆದು ಹೇಳುವುದೇನೆಂದರೆ ಈ ಶಾಸ್ತ್ರದ ರಚನೆಯು ನಮ್ಮಿಂದ ಆಗಲಿಲ್ಲ. ಇದಂತೂ ಪುದ್ಗಲಮಯ ಶಬ್ದಗಳ ರಚನೆಯಿದೆ. ಆದುದರಿಂದ ಈ ಟೀಕೆಯನ್ನು ಅಮೃತ ಚಂದ್ರ ಸೂರಿಗಳು